ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/20/2016-17. ದಿನಾಂಕ 26-09-2016.

| ವಾದಿಗಳು | ಪ್ರತಿವಾದಿಗಳು |
| --- | --- |
| ಯಲ್ಲಮ್ಮ ಗಂಡ ಲೇಟ್ ಅಜ್ಜಣ್ಣ<br>ತಾಯಕನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಗುಡೇಕೋಟೆ |
| ಕೂಡ್ಲಿಗಿ ತಾಲೂಕು ಕುಮತಿ ಗ್ರಾಮದ ಸನಂ 276. ವಿಸ್ತೀರ್ಣ 4-02. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕುಮತಿ ಗ್ರಾಮದ ಸನಂ 276. ವಿಸ್ತೀರ್ಣ 4-02. ಎಕ್ರೆ ಜಮೀನನ್ನು ಸದರಿ ಗ್ರಾಮದ ಯಲ್ಲಮ್ಮ ಗಂಡ ಲೇಟ್ ಅಜ್ಜಣ್ಣ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕುಮತಿ ಇವರು ನಮೂನೆ-21 ನೋಟಿಸನ್ನು ದಿನಾಂಕ 19-08-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಮರಣ ಪ್ರಮಾಣ ಪತ್ರ ಹಾಗೂ ವಂಶವೃಕ್ಷ ಸಲ್ಲಿಸಿಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 02/2015-16. ದಿನಾಂಕ 20-09-2015. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 26-09-2016 ರಂದು ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಕುಮತಿ ಗ್ರಾಮದ ಸನಂ 276. ವಿಸ್ತೀರ್ಣ 4-02. ಎಕ್ರೆ ಜಮೀನು ನಮ್ಮ ಮಾವನವರಾದ ಅಂಗಡಿ ಗುರಣ್ಣ ತಂದೆ ಕೆಂಚಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 11-02-1982 ರಂದು ಹಾಗೂ ನಮ್ಮ ಅತ್ತೇಯವರಾದ ಸಿದ್ದಮ್ಮ ಗಂಡ ಗುರಣ್ಣ ಇವರು ದಿನಾಂಕ 25-04-1992 ರಂದು ಹಾಗೂ ನನ್ನ ಗಂಡನಾದ ಅಜ್ಜಣ್ಣ ತಂದೆ ಲೇಟ್ ಗುರಣ್ಣ ಇವರು ದಿನಾಂಕ 11-01-1990 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಅರ್ಜಿದಾರರು ಮರಣ ಪ್ರಮಾಣ ಪತ್ರ ಸಲ್ಲಿಸಿಲ್ಲದ ಕಾರಣ ಹಾಗೂ ನಾಡಕಾರ್ಯಾಲಯದಿಂದ ವಂಶವೃಕ್ಷ ಸಲ್ಲಿಸಿಲ್ಲದ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಪುತಿ.ನೊ-2.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕುಮತಿ ಗ್ರಾಮದ ಸನಂ 276. ವಿಸ್ತೀರ್ಣ 4–02. ಎಕ್ರೆ ಜಮೀನಿನ ಅರ್ಜಿದಾರರು ಮರಣ ಪ್ರಮಾಣ ಪತ್ರ ಹಾಗೂ ನಾಡಾಕಾರ್ಯಾಲಯದಿಂದ ವಂಶವೃಕ್ಷ ಸಲ್ಲಿಸಿಲ್ಲದ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಪಹಣಿಯನ್ನು ಯಥಾಸ್ಥಿತಿಯಂತೆ ಮುಂದುರೆಸಲು ಆದೇಶಿಸುತ್ತಾ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 26–09–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ.
ಗುಡೇಕೋಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಯಲ್ಲಮ್ಮ ಗಂಡ ಲೇಟ್ ಅಜ್ಜಣ್ಣ ತಳಯಕನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಗುಡೇಕೋಟೆ ಇವರಿಗೆ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.